ಬೆಟ್ಟದ ಬದಿಯಲ್ಲಿರುವ ಬೇಲಿಯನ್ನು ಏರಿ ದಾಟಿದ ರಸೂಲನು ಖಬರಸ್ಥಾನವನ್ನು ಪ್ರವೇಶಿಸಿದ. ಹಲವು ಗೋರಿಗಳು ಹಾಗೂ ಮೊಣಕಾಲೆತ್ತರ ಬೆಳೆದ ಹುಲ್ಲಿನ ನಡುವಿಂದ ಅವನು ಯಾವ ಅಡೆತಡೆಯೂ ಇಲ್ಲದೆ, ಸರಾಗವಾಗಿ ನಡೆದು ಈ ಹೊಸ ಗೋರಿಯತ್ತ ಬಂದ. ಮಸುಕು ಬೆಳ್ದಿಂಗಳಲ್ಲಿ ಹೊಸಗೋರಿಯನ್ನು ದಿಟ್ಟಿಸಿದ. ಗೋರಿಯ ಸನಿಹದಲ್ಲಿ ಬೋರೆಗಿಡವಿತ್ತು. ಗೋರಿಯ ಮೇಲೆ ನೆಟ್ಟ ಕಸ್ತೂರಿ ಗಿಡ ಒಣಗಿ ಒಂದೆಡೆ ವಾಲಿತ್ತು. ಸಂಜೆಗೆ ಬಂದಾಗ ಬೇಲಿಯ ಆಚೆ ನಿಂತ ಈ ಗುರುತನ್ನು ಮೊದಲೇ ಗಮನಿಸಿದ್ದ.

ಕೈಯಲ್ಲಿದ್ದ ಸನಿಕೆ ಮತ್ತು ಬುಟ್ಟಿಯನ್ನು ಅವನು ಕೆಳಗೆ ಇಟ್ಟ. ಲುಂಗಿಯನ್ನು ಮೇಲೆತ್ತಿ ಕಟ್ಟಿದ. ಸುತ್ತಮುತ್ತ ನೋಟ ಹರಿಸಿದ. ಗೋರಿಯಲ್ಲಿ ಹೂತ ಹೆಣದ ಹೊರತು, ಬೇರೆ ಯಾವ ನರಪಿಳ್ಳೆಯೂ ಅಲ್ಲಿರಲಿಲ್ಲ.

ಅವನು ಕೆಳಗೆ ಬಾಗಿ ಗೋರಿಯ ಮೇಲಿರಿಸಿದ ದೊಡ್ಡ ಕಲ್ಲುಗಳನ್ನು ಮೊದಲಿಗೆ ಬದಿಗೆ ಸರಿಸಿದ. ಕಸ್ತೂರಿ ಗಿಡವನ್ನು ಕಿತ್ತು ಬಿಸುಡಿದ. ಬಳಿಕ ಕೈಯಲ್ಲಿ ಸನಿಕೆ ಹಿಡಿದು ಕೆಲಕ್ಷಣ ನಿಶ್ಚಲವಾಗಿ ನಿಂತ. ಮತ್ತೊಮ್ಮೆ ಆಚೆ ಈಚೆಗೆ ನೋಡಿ, ಸನಿಕೆಯಿಂದ ಗೋರಿಯ ಮೇಲಿನ ಮಣ್ಣನ್ನು ಬದಿಗೆ ಸರಿಸಲಾರಂಭಿಸಿದ. ಆ ಶಾಂತ ನೀರವ ವಾತಾವರಣದಲ್ಲೂ ಸನಿಕೆಯ ಖಸ್‌ಬಸ್ ಎಂಬ ವಿಚಿತ್ರ ಸದ್ದು ಕೇಳಿ ಬರುತ್ತಿತ್ತು.

ಅದು ಮರಳಿನಿಂದ ಕೂಡಿದ ಹರಬರಕು ಮರಡಿ ನೆಲವಾಗಿತ್ತು. ಊರಿನ ಒಂದು ಮೂಲೆಯಲ್ಲಿ ಈ ಮಸಣದ ಜಾಗವನ್ನು ಮೀಸಲಿಡಲಾಗಿತ್ತು. ಆ ನೆಲದಲ್ಲಿ ಹುಗಿದ ಮನುಷ್ಯನ ಹೆಣ ನಾಲ್ಕಾರು ದಿನಗಳಲ್ಲಿ ಮಣ್ಣಾಗಿ ಬಿಡುತ್ತಿತ್ತು. ಹೀಗಾಗಿ ನರಿ–ತೋಳಗಳ ಭಯದಿಂದ ಗೋರಿಯನ್ನು ಆಳವಾಗಿ ತೋಡಬೇಕಾದ ಅಗತ್ಯವಿರಲಿಲ್ಲ.

ಎಂದಿನ ರೂಢಿಯಂತೆ ರಸೂಲನು ಗೋರಿಯ ಭಾಗವನ್ನು ಸಾಫು ಮಾಡಿದ. ಕೆಳಗೆ ಬಾಗಿ ಅವನು ಗೋರಿಯ ಜಾಗವನ್ನು ಮುಟ್ಟಿನೋಡಿದ. ಬಳಿಕ ಮತ್ತೆ ಸನಿಕೆಯಿಂದ ಸರಪರ ಅಗೆಯಲಾರಂಭಿಸಿದ.

ಸುತ್ತಲೂ ಚಾಚಿಕೊಂಡ ಆ ಖಬರಸ್ಥಾನ ಶಾಂತವಾಗಿತ್ತು. ಸತ್ತವರೆಲ್ಲ ಅಲ್ಲಿ ಶಾಂತವಾಗಿ ಮಲಗಿದ್ದರು. ಶಾಶ್ವತವಾಗಿ ನಿದ್ದೆ ಹೋಗಿದ್ದರು. ಎಷ್ಟೋ ಜನರು ಮಣ್ಣಲ್ಲಿ ಮಣ್ಣಾಗಿ ಹೋಗಿದ್ದರು. ಕೆಲವರ ಅಸ್ಥಿಪಂಜರದ ಶಿಲ್ಕು ಉಳಿದಿತ್ತು. ಅವುಗಳ ಮೇಲೆ ಕಸ್ತೂರಿಗಿಡಗಳು ನಳನಳಿಸುತ್ತಿದ್ದವು. ಅದರ ಮಸುಕು ನೆರಳು ಸಂಪೂರ್ಣ ಮಸಣದೊಳಗೆಲ್ಲ ಪಸರಿಸಿತ್ತು. ಮಸುಕು ಬೆಳ್ದಿಂಗಳು ಆ ಭಯಾನಕ ವಾತಾವರಣವನ್ನು ಮತ್ತಷ್ಟು ಭೀಕರಗೊಳಿಸುತ್ತಿತ್ತು.

ರಸೂಲನ ಲಕ್ಷ್ಯ ಅತ್ತ ಇರಲಿಲ್ಲ. ಅವನು ಸರಪರ ಮಣ್ಣು ಎತ್ತಿ ಹೊರಗೆ ಹಾಕುವುದರಲ್ಲಿ ಮುಳುಗಿದ. ಅಗೆದ ಮಣ್ಣು ಹುಲ್ಲಿನ ಮೇಲೆ ಬಿದ್ದು ಭಸಕ್ ಭಸಕ್ ಎಂದು ಸದ್ದು ಮಾಡುತ್ತಿತ್ತು. ಅವನು ಅಗೆಯುತ್ತಿರುವಾಗ ಫಕ್ಕನೆ ಬೆಚ್ಚಿದ. ಅಗೆಯುವದನ್ನು ನಿಲ್ಲಿಸಿ ಕಿವಿ ನಿಮಿರಿಸಿ ಆಲಿಸ ತೊಡಗಿದ. ಸನಿಹದಲ್ಲೇ ಯಾರದೋ ಹೆಜ್ಜೆಯ ಸದ್ದು ಕೇಳಿ ಬರಲಾರಂಭಿಸಿತ್ತು. ಯಾರೋ ನಡೆದು ಬರುವಂತೆ ಹುಲ್ಲಿನ ಸರಕ ಬರಕ ಸದ್ದು ಕೇಳಿಸುತ್ತಿತ್ತು.

ಚಂದ್ರ ಈಗ ಪಡುವಣ ಕ್ಷಿತಿಜಕ್ಕೆ ಹೋಗಿದ್ದ. ಮಬ್ಬು ಬೆಳಕಿನಿಂದಾಗಿ ಕತ್ತಲೆ ಮಸುಕಾಗಿ ಕಾಣುತ್ತಲಿತ್ತು. ಅವನು ಗಲಿಬಿಲಿಗೊಂಡು ಸುತ್ತಲೂ ಕಣ್ಣಾಡಿಸಿದ. ದೂರ ದೂರದವರೆಗೂ ನೋಟ ಹರಿಸಿದ. ಅವನಿಗೆ ಸನಿಹದಲ್ಲೇ ಯಾರೋ ನಿಂತಂತೆ ಭಾಸವಾಯಿತು.

ಅವನು ಕೆಲ ಕ್ಷಣ ಯಾವ ಚಲನೆಯನ್ನೂ ಮಾಡದೆ ಸ್ತಬ್ಧವಾಗಿ ನಿಂತು ಕೊಂಡ. ಕೈಯಲ್ಲಿದ್ದ ಸನಿಕೆಯನ್ನು ಬಿಗಿಯಾಗಿ ಹಿಡಿದುಕೊಂಡ. ಪ್ರಸಂಗ ಬಂದರೆ ಎದುರಿಗೆ ಬಂದ ವ್ಯಕ್ತಿಯ ಹಣೆಯ